**ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ**

ಸಿ.ಸಿ.ನಂಬರ್ : 158/2018

ಪಿ.ಡಬ್ಲ್ಯೂ : 1 ಸಿ.ಡಬ್ಲ್ಯೂ 4

| | |
|---|---|
| ಸಾಕ್ಷಿದಾರರ ಹೆಸರು | : ಮಲ್ಲಿಕಾರ್ಜುನ ಶಿರಗೊಂಡ |
| ತಂದೆಯ ಹೆಸರು | : ಜ್ಞಾನಪ್ಪ |
| ವಯಸ್ಸು | : 58 ವರ್ಷ |
| ಉದ್ಯೋಗ | : ಅಬಕಾರಿ ಉಪ ನರೀಕ್ಷಕರು |
| ವಾಸಸ್ಥಳ | : ಶಂಕೇಶ್ವರ |
| ಸಮಯ | : 12.00 |

ಸಾಕ್ಷಿಗೆ ಇಂದು ದಿನಾಂಕಃ 21-02-2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ**

ಸಿಂದಗಿ ಅಬಕಾರಿ ಕಛೇರಿಯಲ್ಲಿ 2002 ರಿಂದ ದಿ 17-08-2017 ನಂತರದಲ್ಲಿ 2024 ರಿಂದ 2025 ರವೆರೆಗೆ ಅಬಕಾರಿ ರಕ್ಷಕ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 25-02-2017 ರಂದು ನಾನು ಮತ್ತು ಇತರ ಸಿಬ್ಬಂದಿಗಳಾದ ಚಾ ಸಾ 2 ಮತ್ತು 3 ರವರು ಠಾಣೆಯಲ್ಲಿದ್ದಾಗ ಚಾ ಸಾ 1 ರವರು ರಸ್ತೆ ಕಾವಲಿಗೆ ಹೋಗುವದು ಇದೆ ಎಂದು ತಿಳಿಸಿದ್ದು ಅದರಂತೆ ನಮ್ಮ ವಾಹನ ಸಂಖ್ಯೆ ಕೆಎ/28/ಜಿ/315 ವಾಹನದಲ್ಲಿ ಚಿಕ್ಕರೂಗಿ ಗ್ರಾಮದಿಂದ ತಾಂಬಾ ರಸ್ತೆ ಮಾರ್ಗವಾಗಿ ರಸ್ತೆ ಕಾವಲು ಮಾಡುತ್ತಿದ್ದಾಗ ತಾಂಬಾ ಕಡೆಯಿಂದ ಚಿಕ್ಕರೂಗಿ ಗ್ರಾಮದ ರಸ್ತೆ ಮಾರ್ಗವಾಗಿ ದ್ವಿ ಚಕ್ರ ವಾಹನ ಬರುತ್ತಿದ್ದು ಅದನ್ನು ತಡೆದು ನಿಲ್ಲಿಸಲಾಗಿ ಆತ ಗಾಬರಿಗೊಂಡಂತೆ ಕಂಡಿದ್ದು, ಆತನ ದ್ವಿ ಚಕ್ರ ವಾಹನದ ಮೇಲೆ ಸ್ಟಾರ ಪಾನ ಮಸಾಲಾ ಎಂದು ಬರೆದಿರುವ ಬ್ಯಾಗ ಇದ್ದು ಸ್ಥಳದಲ್ಲಿ ಯಾರು ಪಂಚರಿಲ್ಲದ ಕಾರಣ ನಮ್ಮ ಸಿಬ್ಬಂದಿಗಳಾದ ಚಾ ಸಾ 2

ಮತ್ತು 3 ರವರನ್ನೆ ಪಂಚರನ್ನಾಗಿ ಮಾಡಿಕೊಂಡು ಚಾ ಸಾ 1 ರವರು ಸ್ಥಳದಲ್ಲಿ ಸರ್ಚ ವಾರಂಟ ತಯಾರಿಸಿ ವಾಹನದ ಶೋಧನೆ ಮಾಡಲಾಗಿ 90 ಎಮ್ಎಲ್ 30 ಓ ಸಿ ಟೆಟ್ರಾ ಪಾಕೆಟುಗಳು ಇದ್ದು ಎಮ್ ಸಿ ನಂಬರ 1 ಎಂದು ಬರೆದಿರುವ ವಿಸ್ಕಿ 180 ಎಮ್ ಎಲ್ 12 ಗಾಜಿನ ಬಾಲಟಿಗಳು ಅವುಗಳಲ್ಲಿ ಸದರಿ ಮು ಮಾ ಪಂಚರ ಸಮಕ್ಷಮ ಚಾ ಸಾ 1 ರವರು ಜಪ್ತಿ ಮಾಡಿಕೊಂಡು 30 ಓ ಸಿ 26 ಟೆಟ್ರಾ ಪಾಕೆಟುಗಳನ್ನು ಹಾಗೂ 12 ಎಮ್ ಸಿ ನಂಬರ 1 ಬಾಟಲಿಗಳಿಂದ 12 ಬಾಟಲಿಗಳನ್ನು ರಸಾಯನಿಕ ಪರೀಕ್ಷೆಗಾಗಿ ತೆಗೆದು ಚಾ ಸಾ 2 ಮತ್ತು 3 ರವರ ಹಾಗೂ ಚಾ ಸಾ 1 ರವರ ಸಹಿ ಇರುವ ಚೀಟಿಗಳನ್ನು ಅವುಗಳ ಮೇಲೆ ಅಂಟಿಸಲಾಯಿತು.

ಸ್ಥಳದಲ್ಲಿ ಇದ್ದ ವ್ಯಕ್ತಿಗೆ ಮಧ್ಯ ಸಾಗಾಟಣೆ ಮಾಡಲು ಪರವಾನಿಗೆ ಕೇಳಿದ್ದು ಆತ ಪರವಾನಿಗೆ ಇಲ್ಲ ಎಂದು ಹೇಳಿದ್ದು ಆತನ ಹೆಸರು ಚಂಧ್ರಾಮಪ್ಪ ಪೂಜಾರಿ ಎಂದು ತಿಳಿಸಿದ್ದು  ಪಂಚನಾಮೆ ಚಾ ಸಾ 1 ರವರು ಬೆಳಿಗ್ಗೆ 9 ರಿಂದ 10 ಗಂಟೆವರೆಗೆ ಮಾಡಿರುತ್ತಾರೆ.  ನಂತರ ಜಪ್ತಿ ಮಾಡಿಕೊಂಡ ಮು ಮಾ ಹಾಗೂ ದ್ವಿ ಚಕ್ರ ವಾಹನ ನಂಬರ ಕೆಎ/29/ವಿ/3553 ವಾಹನವನ್ನು ಮು ಮಾ ಆರೋಪಿ ಠಾಣೆಗೆ ತೆಗೆದುಕೊಂಡು ಬಂದು ಚಾ ಸಾ 1 ರವರು ಸರ್ಕಾರದ ಪರವಾಗಿ ದುರ್ಾನ್ನು ನೀಡಿರುತ್ತಾರೆ. ಚಾ ಸಾ 6 ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ತಾವು ಜಪ್ತಿ ಮಾಡಿಕೊಂಡ ನ್ಯಾಯಾಲಯದ ಮುಂದೆ ಇರುವ ಮು ಮಾ 26 ಓ ಸಿ ಟೆಟ್ರಾ ಪಾಕೆಟುಗಳನ್ನು ಒಟ್ಟಾಗಿ ಮು ಮಾ 1 ಎಂದು ಗುರುತಿಸಲಾಯಿತು. 12 ವಿಸ್ಕಿ ಬಾಟಲಿಗಳನ್ನು ಒಟ್ಟಾಗಿ ಮು ಮಾ 2 ಎಂದು ಗುರುತಿಸಲಾಯಿತು.  ದ್ವಿ ಚಕ್ರ ವಾಹನ ನೋಡಿದರೆ ಗುರುತಿಸುತ್ತೇನೆ. ಆದರೆ

ಫೋಟೊವನ್ನು ಹಾಜರು ಮಾಡದ ಕಾರಣ ತೋರಿಸಲು ಆಗಿಲ್ಲ. ಸಾಕ್ಷಿಯ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಆರ್ ಆಯ್ ಎಮ್ ವಕೀಲರಿಂದ**

ಚಾ ಸಾ 6 ರವರು ನನ್ನ ಹೇಳಿಕೆ ಅಬಕಾರಿ ಕಛೇರಿಯಲ್ಲಿ ದಾಖಲು ಮಾಡಿಕೊಂಡಿರುತ್ತಾರೆ. ಸಾಕ್ಷಿಗೆ ಸದರಿಯವರು ತಾವು ನೀಡಿರುವ ಹೇಳಿಕೆ ದಾಖಲಿಸಿಕೊಂಡಿರುತ್ತಾರೆಯೇ ಅಥವಾ ಅವರು ಬರೆದುಕೊಂಡಿದ್ದರಾ ಎಂದರೆ ಸಾಕ್ಷಿ ನಾನು ಹೇಳಿದ್ದನ್ನು ಬರೆದಿರುತ್ತಾರೆ ಎಂದು ನುಡಿದಿರುತ್ತಾರೆ. ದಾಳಿಗೆ ದಿನಾಂಕ 25-07-17 ರಂದು ಬೆಳಿಗ್ಗೆ 9 ಗಂಟೆಗೆ ಸುಮಾರಿಗೆ ಹೋಗಿದ್ದೆವು. ನಾನು ಚಾ ಸಾ 6 ರವರ ಮುಂದೆ ಹೇಳಿಕೆ ನೀಡುವಾಗ ನಾನು ಕಛೇರಿಯಲ್ಲಿದ್ದಾಗ ಚಾ ಸಾ 1 ರವರು ಚಾ ಸಾ 2 ಮತ್ತು 3 ರವರಿಗೆ ಚಿಕ್ಕರೂಗಿ ತಾಂಬಾ ಗ್ರಾಮಕ್ಕೆ ಹೋಗುವ ರಸ್ತೆ ಮಾರ್ಗವಾಗಿ ಗಸ್ತು ಕರ್ತವ್ಯಕ್ಕೆ ಹೋಗುವದು ಇದೆ ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿ ಹೇಳಿಕ್ಕೆ ನೀಡಿದ್ದು ನಿಜ ಆದರೆ ದಿನಾಂಕ ತಪ್ಪಾಗಿ ನಮೂದಗಿರುತ್ತದೆ ಎಂದು ನುಡಿದಿರುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ದಿ 25-07-17 ರಂದು ನಾವು ಚಿಕ್ಕರೂಗಿ ಗ್ರಾಮದಿಂದ ತಾಂಬಾ ಮಾರ್ಗವಾಗಿ ದಾಳಿಗೆ ಹೊಗಿರಲಿಲ್ಲ ಎಂದರೆ ಸರಿಯಲ್ಲ. ಜಪ್ತಿ ಮಾಡಿಕೊಂಡ ಒಟ್ಟು 30 ಟೆಟ್ರಾ ಪಾಕೆಟುಗಳಲ್ಲಿ 26 ಟೆಟ್ರಾ ಪಾಕೆಟಗಳನ್ನು ಹೊರತುಪಡಿಸಿ ಉಳಿದ 4 ಟೆಟ್ರಾ ಪಾಕೆಟುಗಳನ್ನು ಏನು ಮಾಡಿರುತ್ತೀರಾ ಎಂದರೆ ಸಾಕ್ಷಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ದಾಳಿ ಕಾಲಕ್ಕೆ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯ ಕಡೆಯಿಂದಲೇ ಮು ಮಾ ಜಪ್ತಿ ಮಾಡಲಾಗಿರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಜಪ್ತಿ ಮಾಡಿಕೊಂಡು ಮು ಮಾ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇಲಾಖಾ ಸಿಬ್ಬಂದಿಗಳನ್ನೆ ಪ್ರಕರಣಕ್ಕೆ ಅನುಕೂಲವಾಗಿ ಎಂದು ಪಂಚರನ್ನಾಗಿ ಮಾಡಿ ಸುಳ್ಳು ಪ್ರಕರಣ

ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ದಾಳಿ ಸಮಯಕ್ಕೆ ಜಪ್ತಿ ಆದ ದ್ವಿ ಚಕ್ರ ವಾಹನದ ಮಾಲಿಕರು ಚಾ ಸಾ 1 ರವರು ತನಿಖೆ ಮಾಡಿರುತ್ತಾರೆಯೇ ಎಂದರೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಪಂಚರ ಸಮಕ್ಷಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಮು ಮಾ ಜಪ್ತಿ ಮಾಡಿಕೊಂಡಿರುತ್ತೇವೆ ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಚಿಕ್ಕರೂಗಿ ತಾಂಬಾ ಗ್ರಾಮದ ರಸ್ತೆ ಜನ ದಟ್ಟಣೆ ಪ್ರದೇಶ ಇರುತ್ತದೆ ಎಂದರೆ ಸಾಕ್ಷಿ ನಾವು ಹೋದಾಗ ಇದ್ದಿರಲಿಲ್ಲ ಎಂದು ನುಡಿದಿರುತ್ತಾರೆ. ಸದರಿ ರಸ್ತೆ ಅಕ್ಕ ಪಕ್ಕದಲ್ಲಿ ಸಾಕಷ್ಟು ಜಮೀನು ಇದ್ದು ಕೆಲಸ ಮಾಡುವವರು ಸಿಗುತ್ತಾರೆ ಎಂದರೆ ಆಗ ಯಾರು ಇದ್ದಿರಲಿಲ್ಲ ಎಂದು ನುಡಿದಿರುತ್ತಾರೆ. ಆರೋಪಿಯು ನಾವು ಆಪಾದಿಸಿದಂತೆ ಅಪರಾಧ ಮಾಡಿದೇ ಇದ್ದರೂ ಸಹ ಕಛೇರಿ ಅಂಕಿ ಅಂಶಗಳ ಸಲುವಾಗಿ ಸುಳ್ಳು ಪ್ರಕರಣದ ದಾಖಲು ಮಾಡಿ ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.